ಸರ್ಕಾರಿ ಶಾಲೆಗಳಲ್ಲಿ ಆಂಗ್ಲಭಾಷೆ ಬೋಧನೆ

395(536); ಶ್ರೀ ರವಿ ಸಿ.ಟಿ (ಚಿಕ್ಕಮಗಳೂರು)

ಅ) ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲ ಭಾಷೆ ಕಲಿಸುವ ವ್ಯವಸ್ಥೆ ಯಾವ ವರ್ಷದಿಂದ ಅನುಷ್ಠಾನಗೊಳಿಸಲಾಗಿದೆ;

ಆ) ಈ ವ್ಯವಸ್ಥೆ ಜಾರಿಗೆ ಬಂದಿದ್ದರೆ ಎಲ್ಲಾ ಶಾಲೆಗಳಲ್ಲಿ ಆಂಗ್ಲ ವಿಷಯ ಬೋಧಿಸಲು ಶಿಕ್ಷಕರು ಲಭ್ಯವಿದ್ದಾರೆಯೇ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ:ಇಡಿ 37. ಪಿಜಿಸಿ:2005 ದಿನಾಂಕ:-21-10-2006ರ ಪ್ರಕಾರ 2007-08ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಿರುತ್ತದೆ

ಆ) ಹೌದು ಲಭ್ಯವಿರುತ್ತಾರೆ. ಶಾಲೆಗಳಲ್ಲಿಯೇ ಇರುವ ಆಂಗ್ಲ ಭಾಷಾ ಜ್ಞಾನವಿರುವ ಒಬ್ಬ ಶಿಕ್ಷಕರು ಆಂಗ್ಲ ಭಾಷೆಯನ್ನು ಬೋಧಿಸುತ್ತಿರುತ್ತಾರೆ. ಜೊತೆಗೆ ಸರ್ಕಾರಿ ಆದೇಶ ಸಂಖ್ಯೆ:-ಇಡಿ:135.ಯೋಯೋಕಾ:2010 ದಿನಾಂಕ:02-07-2010ರ ಪ್ರಕಾರ ಆಂಗ್ಲ ಭಾಷಾ ಪರಿಣಿತ ಶಿಕ್ಷಕರನ್ನು ಹೆಚ್ಚಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಿ ಎ [ಆಂಗ್ಲ] ಪದವಿ ಪಡೆಯಲು 268 ಶಿಕ್ಷಕರನ್ನು ಕಳೆದ ಮೂರು ವರ್ಷಗಳಿಂದ ವೇತನಸಹಿತವಾಗಿ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸಲಾಗಿದೆ.

ಶಿಕ್ಷಕರ ವರ್ಗಾವಣೆ ಕುರಿತು

394(535); ಶ್ರೀ ರವಿ ಸಿ.ಟಿ (ಚಿಕ್ಕಮಗಳೂರು)

ಅ) ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಇತ್ತೀಚಿಗೆ ಮಾನ್ಯ ಉಚ್ಚ ನ್ಯಾಯಾಲಯ ಸಲಹೆ ನೀಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಉಚ್ಚ ನ್ಯಾಯಾಲಯದ ಸಲಹೆಗಳನ್ನು ಪಾಲಿಸಲಾಗುತ್ತಿದೆಯೇ,

ಆ) ಹಾಗಿದ್ದಲ್ಲಿ ಮಾಡಿರುವ ಮಾರ್ಪಾಡುಗಳು ಯಾವುವು,

ಇ) ಆಗಿಲ್ಲದಿದ್ದಲ್ಲಿ, ನ್ಯಾಯಾಲಯದ ಸಲಹೆಗಳನ್ನು ಎಷ್ಟು ಕಾಲಮಿತಿಯೊಳಗಾಗಿ ಜಾರಿಗೆ ತರಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) **ಯಿಂದ** ಇ) **ವರೆಗೆ** ಮಾನ್ಯ ಉಚ್ಚ ನ್ಯಾಯಾಲಯ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಸಲಹೆ ನೀಡಿರುವ ಬಗ್ಗೆ ದಿನಾಂಕ 21-11-2013ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ವಿವರವಾಗಿ ಚರ್ಚಿಸಿದೆ

ವೈದ್ಯಕೀಯ ಕಾರಣಗಳು ಮತ್ತು ಪತಿ ಪತ್ನಿ ಪ್ರಕರಣಗಳಲ್ಲಿ ವರ್ಗಾವಣೆ ಮಿತಿಯನ್ನು ಹೆಚ್ಚಿಸುವ ಬಗ್ಗೆ ಸಂಬಂಧಿಸಿದ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ವೆಚ್ಚ ಭರಿಸುವುದು

(384); ಡಾ: ಗುರುಪಾದಪ್ಪ ನಾಗಮಾರಪಳ್ಳಿ (ಬಿದರ್)

ಅ) ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪ್ರವೇಶ ಪರೀಕ್ಷೆಗಳಲ್ಲಿ ಮೊದಲ 5 ರ್‍ಯಾಂಕ್‌ಗಳನ್ನು ಗಳಿಸಿರುವ 10 ಪ್ರತಿಭಾನ್ವಿತ ವಿದ್ಯಾರ್ಥಿಗಳ ವೆಚ್ಚವನ್ನು ಸರ್ಕಾರವೇ ಭರಿಸುವುದಾಗಿ ದಿ, 28-05-2013 ರಂದು ಪ್ರಕಟಿಸಿವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನ ಪ್ರವೇಶ ಪರೀಕ್ಷೆಗಳಲ್ಲಿ ಮೊದಲ 5 ರ್‍ಯಾಂಕ್‌ಗಳನ್ನು ಗಳಿಸಿರುವ 10 ಜನ ವಿದ್ಯಾರ್ಥಿಗಳಿಗೆ ಸರ್ಕಾರವೇ ಮುಂದಿನ ಶಿಕ್ಷಣದ ವೆಚ್ಚವನ್ನು ಭರಿಸಿದೆಯೇ; ಹಾಗಿದ್ದಲ್ಲಿ ಸದರಿ ವಿದ್ಯಾರ್ಥಿಗಳ ಹೆಸರು, ವಿವರ ಮತ್ತು ಪ್ರತಿ ವಿದ್ಯಾರ್ಥಿಗಳಿಗೆ ಸರ್ಕಾರ ಭರಿಸಿರುವ ವೆಚ್ಚದ ಸಂಪೂರ್ಣ ಮಾಹಿತಿಗಳೇನು, (ಸಿ ಇ ಟ ಪರೀಕ್ಷೆಯ